ಕರ್ನಾಟಕ ಸರ್ಕಾರ

ಸಂಖ್ಯೆ: ಬಿಟಿಇ/65/ಇಎಫ್ಎಸ್/2018-19

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ.
ಅರಮನೆ ರಸ್ತೆ, ಬೆಂಗಳೂರು,
ದಿನಾಂಕ:25/03/2019

**ಸುತ್ತೋಲೆ**

ವಿಷಯ:- ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಮತ್ತು ಗಣಿ ಶಾಲೆಗಳು 2019 ರ ಏಪ್ರಿಲ್/ಮೇ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗೆ ಬೇಕಾಗಿರುವ ಥಿಯರಿ/ಪ್ರಾಯೋಗಿಕ ಉತ್ತರಪತ್ರಿಕೆಗಳು ಮತ್ತು ಲೇಖನ ಸಾಮಾಗ್ರಿಗಳನ್ನು ತಾಂತ್ರಿಕ ಪರೀಕ್ಷಾ ಮಂಡಳ ಉಗ್ರಾಣ ವಿಭಾಗದಿಂದ ಪಡೆಯುವ ಬಗ್ಗೆ

ಉಲ್ಲೇಖ:-1) ಈ ಕಚೇರಿ ಪತ್ರ ಸಂಖ್ಯೆ: ಬಿಟಿಇ /65/ಇಎಫ್ಎಸ್/2018 ದಿನಾಂಕ:17/12/2018

********

ಉಲ್ಲೇಖದನ್ವಯ 2019 ರ ಏಪ್ರಿಲ್/ಮೇ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗೆ ತಮ್ಮ ಸಂಸ್ಥೆಗಳಿಗೆ ಬೇಕಾಗುವ ಲೇಖನ ಸಾಮಾಗ್ರಿಗಳ ಬೇಡಿಕೆ ಮಾಹಿತಿಯನ್ನು ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಮತ್ತು ಗಣಿ ಶಾಲೆಗಳ ಪ್ರಾಂಶುಪಾಲರುಗಳು ಕಡ್ಡಾಯವಾಗಿ ಗೂಗಲ್ ನಮೂನೆ (Google format) ಯ Google ಲಿಂಕ್ ನಲ್ಲಿಯೇ ಬೇಡಿಕೆ ಪಟ್ಟಿಯನ್ನು ಭರ್ತಿ ಮಾಡಿ ದಿನಾಂಕ:20.12.2018 ರೊಳಗಾಗಿ ಕಳುಹಿಸುವಂತೆ ಸೂಚಿಸಲಾಗಿತ್ತು. ಅದರಂತೆ ದಿನಾಂಕ 20/12/2018 ರೊಳಗೆ ಬೇಡಿಕೆ ಪಟ್ಟಿ ಸಲ್ಲಿಸಲಾಗಿರುತ್ತದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಮತ್ತು ಗಣಿ ಶಾಲೆಗಳು 2019 ರ ಏಪ್ರಿಲ್/ಮೇ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗೆ ಬೇಕಾಗಿರುವ ಥಿಯರಿ/ಪ್ರಾಯೋಗಿಕ ಉತ್ತರಪತ್ರಿಕೆಗಳು ಮತ್ತು ಲೇಖನ ಸಾಮಾಗ್ರಿಗಳನ್ನು ತಾಂತ್ರಿಕ ಪರೀಕ್ಷಾ ಮಂಡಳ ಉಗ್ರಾಣ ವಿಭಾಗದಲ್ಲಿ ದಿನಾಂಕ 25/03/2019 ರಿಂದ 28/03/2019 ರವರಗೆ ವಿತರಿಸಲಾಗುವುದು. ಪ್ರಯುಕ್ತ , ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಎಲ್ಲಾ ಪ್ರಾಂಶುಪಾಲರುಗಳು ನಿಗದಿತ ದಿನಾಂಕದೊಳಗೆ ಪಡೆಯಲು ಸೂಚಿಸಲಾಗಿದೆ. ನಿಗದಿತ ಕಾಲಾವಧಿಯಲ್ಲಿ ಪಡೆಯದ್ದಿದ್ದಲ್ಲಿ ಸಂಸ್ಥೆಯ ಪ್ರಾಂಶುಪಾಲರುಗಳು ನೇರ ಜವಬ್ದಾರರಾಗಿರುತ್ತಾರೆ. ನಿಗದಿಪಡಿಸಿದ ದಿನಾಂಕದ ನಂತರ ಲೇಖನ ಸಾಮಾಗ್ರಿಗಳನ್ನು ವಿತರಿಸುವುದಿಲ್ಲ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು

**ಇವರಿಗೆ,**

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ.

<u>**ಪ್ರತಿ:-ಮಾಹಿತಿಗಾಗಿ**</u>

1. ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು/ಹಿರಿಯ ತಾಂತ್ರಿಕ ಸಹಾಯಕರು/ ರಿಜಿಸ್ಟ್ರಾರ್ [ಪರೀಕ್ಷೆ]
2. ಇ- ಆಡಳಿತ ವಿಭಾಗಕ್ಕೆ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ.
3. ಕಛೇರಿ ಪ್ರತಿ.